


# 10G ಚೀನಾ ಹೈಜಂಪ್

**ಭಾರತ ಸೇರಿದಂತೆ ಹಲವು ದೇಶಗಳು 5ಜಿ ನೆಟ್‌ವರ್ಕ್ ಸೇವೆ ಕಲ್ಪಿಸಲು ತೊಡಗಿರುವ ಹೊತ್ತಿನಲ್ಲಿ ಚೀನಾ ಅತ್ಯಂತ ವೇಗದ ನೆಟ್‌ವರ್ಕ್ ಪರಿಚಯಿಸಿ, ಜಗತ್ತಿನ ಕಣ್ಣರಳಿಸಿದೆ.**

■ **ಶಶಿಕುಮಾರ್ ಸಿ.**

ಭಾರತ ಸೇರಿದಂತೆ ಜಗತ್ತಿನ ಹಲವು ರಾಷ್ಟ್ರಗಳು ಈಗಿನ್ನೂ 5ಜಿ ಸೇವೆ ಸಂಭ್ರಮಿಸುತ್ತಿವೆ. ಆದರೆ ಚೀನಾ ಈ ಎಲ್ಲಾ ದೇಶಗಳ ನೆಟ್‌ವರ್ಕ್ ಸಾಮರ್ಥ್ಯವನ್ನು ಹಿಂದಿಕ್ಕಿ, ವಿಶ್ವದ ಅತ್ಯಂತ ವೇಗದ 10ಜಿ ನೆಟ್‌ವರ್ಕ್ ರೂಪಿಸಿಕೊಂಡು ಎಲ್ಲರನ್ನು ನಿಬ್ಬೆರಗಾಗುವಂತೆ ಮಾಡಿದೆ.

ಚೀನಾದ ಹೆಬ್ಬೈ ಪ್ರಾಂತ್ಯದ ಕ್ಸಿಯಾಂಗನ್ ಸಿಟಿಯಲ್ಲಿ 10ಜಿ ನೆಟ್‌ವರ್ಕ್ ಬ್ರಾಡ್‌ಬ್ಯಾಂಡ್ ಸೇವೆ ಯಶಸ್ವಿಯಾಗಿ ಕಾರ್ಯರೂಪಕ್ಕೆ ಬಂದಿದೆ. ಈ ನೆಟ್‌ವರ್ಕ್‌ನಲ್ಲಿ ಡೌನ್‌ಲೋಡ್ ಸ್ಪೀಡ್ 9834 ಎಂಬಿಪಿಎಸ್ ಇದ್ದರೆ, ಅಪ್‌ಲೋಡ್ ಸ್ಪೀಡ್ 1,008 ಎಂಬಿಪಿಎಸ್ ಇದೆ.

ಈ ಸೇವೆ ಜಾಗತಿಕ ಡಿಜಿಟಲ್ ಮೂಲಭೂತ ಸೌಕರ್ಯದ ಚಿತ್ರಣದ ಮೇಲೆ ಭಾರೀ ಪರಿಣಾಮ ಬೀರಲಿದೆ ಎಂಬ ಚರ್ಚೆ ಟೆಕ್‌ವಲಯದಲ್ಲಿ ಶುರುವಾಗಿದೆ. ಈ ನೆಟ್‌ವರ್ಕ್ ಅಭಿವೃದ್ಧಿಪಡಿಸಿ, ಜಂಟಿಯಾಗಿ ಬಿಡುಗಡೆ ಮಾಡಿದ್ದು ಚೀನಾದ ಟೆಲಿಕಮ್ಯುನಿಕೇಷನ್ ಭಾಗವಾದ ಹುವೈ ಹಾಗೂ ಯುನಿಕಾಮ್ ಕಂಪನಿಗಳು. ಈ ನೆಟ್‌ವರ್ಕ್ ಸೇವೆಯಲ್ಲಿ ಊಹೆಗೆ ನಿಲುಕದ ವೇಗದಲ್ಲಿ ಇಂಟರ್ನೆಟ್ ಬಳಕೆದಾರರಿಗೆ ಲಭ್ಯವಾಗುತ್ತಿದೆ. ಭಾರತದಲ್ಲಿ ಲಭ್ಯವಿರುವ ಅಡ್ವಾನ್ಸ್ಡ್ ಎನ್ನುತ್ತಿರುವ 5ಜಿ ಸೇವೆಯ ಡೌನ್‌ಲೋಡ್ ಹಾಗೂ ಅಪ್‌ಲೋಡ್‌ನ ಲ್ಯಾಟೆನ್ಸಿ ಸ್ಪೀಡ್‌ಗೂ 10ಜಿ ಸೇವೆಯ ಸ್ಪೀಡ್‌ಗೂ ಅಜಗಜಾಂತರ ವ್ಯತ್ಯಾಸ.

ಡೀಪ್‌ಸೀಕ್ ಮೂಲಕ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಈಚೆಗೆ ನಡುಕ ಹುಟ್ಟಿಸಿದ ಚೀನಾ, ಈಗ ನೆಟ್‌ವರ್ಕ್ ಕ್ಷೇತ್ರದಲ್ಲಿ ದೊಡ್ಡ ಬದಲಾವಣೆಗೆ ನಾಂದಿ ಹಾಡಿದೆ. ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಕೆ ಮಾಡುವುದರಲ್ಲಿ ಮಿಕ್ಕೆಲ್ಲ ದೇಶಗಳಿಗಿಂತಲೂ ಚೀನಾ ಮುಂದಿದೆ. ಆವಿಷ್ಕಾರ, ಸಂಶೋಧನೆಯಲ್ಲೂ ಮುಂದಿದೆ.

‘ಎಕನಾಮಿಕ್ ಟೈಮ್ಸ್’ ವರದಿ ಪ್ರಕಾರ, ಚೀನಾ ಆರಂಭಿಸಿರುವುದು ವಿಶ್ವದ ಮೊದಲ ಮತ್ತು ವೇಗದ ನೆಟ್‌ವರ್ಕ್ ಆಗಿದೆ. ಈ ನೆಟ್‌ವರ್ಕ್‌ನಿಂದಾಗಿ ಬಳಕೆದಾರರು ಇಂಟರ್‌ನೆಟ್ ಬಳಕೆ ಮಾಡುವಾಗ ಹಿಂದೆಂದೂ ಸಾಧ್ಯವಾಗದ ಅನುಭವವನ್ನು ಕಾಣಬಹುದಾಗಿದೆ. ವೆಬ್‌ಸೈಟ್, ಆ್ಯಪ್, ಯೂಟ್ಯೂಬ್, ವಿಡಿಯೊ, ಮೂವಿ, ರೀಲ್ಸ್ ಸೇರಿದಂತೆ ಯಾವುದೇ ರೀತಿಯ ಅಂತರ್ಜಾಲ ಸಂಪರ್ಕ ಆಧರಿತ ಸೈಟ್ ಅಥವಾ ಆ್ಯಪ್ ಕ್ಲಿಕ್ ಮಾಡುವ ಲ್ಯಾಟೆನ್ಸಿ ಕೇವಲ 3 ಮಿಲಿ ಸೆಕೆಂಡ್‌ನಷ್ಟಿದೆ. ಅಷ್ಟು ವೇಗದಲ್ಲಿ ಬಳಕೆದಾರರು ಕ್ಲಿಕ್ ಮಾಡಿದ ಬೆನ್ನಲ್ಲೇ ಆ್ಯಪ್ ಅಥವಾ ಸೈಟ್ ಕಾರ್ಯಪ್ರವೃತ್ತಗೊಳ್ಳಲಿದೆ. ಸಾಮಾನ್ಯವಾಗಿ 5ಜಿ ಅಥವಾ 4ಜಿಯಲ್ಲಿ ಕ್ಲಿಕ್ ಮಾಡಿದ ಕೆಲ ಹೊತ್ತಿನ ಬಳಿಕ ಲೋಡ್ ಆಗುತ್ತದೆ. ಆದರೆ ಇಲ್ಲಿ ಈ ಲ್ಯಾಟೆನ್ಸಿ ಅತೀ ಕಡಿಮೆ ಅಂದರೆ ಕ್ಷಣಾರ್ಧದಲ್ಲಿ ಆಗಲಿದೆ.

ಯುನೈಟೆಡ್ ಅರಬ್ ಎಮಿರೈಟ್ಸ್ (ಯುಎಇ) ಹಾಗೂ ಸಿಂಗಪುರ ದೇಶಗಳಲ್ಲಿ ಲಭ್ಯವಿರುವ ನೆಟ್‌ವರ್ಕ್ ಸದ್ಯದ ಅತಿ ವೇಗದ ನೆಟ್‌ವರ್ಕ್ ಎಂದು ಹೇಳಲಾಗುತ್ತದೆ. ಅಲ್ಲಿನ ನೆಟ್‌ವರ್ಕ್ ಅನ್ನೂ ಮೀರಿಸುವಂತಹ ಸೇವೆ ಈ 10ಜಿ. ಯುಎಇನಲ್ಲಿರುವ ಇಂಟರ್‌ನೆಟ್ ಸ್ಪೀಡ್ 313.5 ಎಂಬಿಪಿಎಸ್. ಇನ್ನು ಸಿಂಗಪುರದಲ್ಲಿ 345.3 ಎಂಬಿಪಿಎಸ್ ಸ್ಪೀಡ್ ಇದೆ.

## ಸೆಕೆಂಡ್‌ಗಳಲ್ಲಿ ಮೂವಿ ಡೌನ್‌ಲೋಡ್

10ಜಿ ನೆಟ್‌ವರ್ಕ್‌ನ ವೇಗದ ಅಂತರ್ಜಾಲದ ಮೂಲಕ ಒಂದು ಟಚ್ ಮಾಡಿದರೆ ಸಾಕು. ಕಣ್ಮುಚ್ಚಿ ತೆರೆಯುವುದರೊಳಗೆ ಒಂದು ಸಿನಿಮಾ ಡೌನ್‌ಲೋಡ್ ಆಗಿರುತ್ತೆ. ಉದಾಹರಣೆಗೆ, 20ಜಿಬಿ ಗಾತ್ರದ 4ಕೆ ರೆಸಲ್ಯೂಷನ್‌ನ ಸಿನಿಮಾವನ್ನು ಕೇವಲ 20 ಸೆಕೆಂಡ್‌ನಲ್ಲಿ ಡೌನ್‌ಲೋಡ್ ಮಾಡಬಹುದಾಗಿದೆ. 1ಜಿ ಜಿಬಿಪಿಎಸ್ ಸ್ಪೀಡ್ ಕನೆಕ್ಷನ್‌ನಲ್ಲಿ ಇದೇ ವಿಡಿಯೊ ಡೌನ್‌ಲೋಡ್ ಮಾಡಲು 7ರಿಂದ 10 ನಿಮಿಷ ಬೇಕಾಗುತ್ತದೆ.

ಕ್ಲೌಡ್ ಕಂಪ್ಯೂಟಿಂಗ್, ವರ್ಚುವಲ್ ರಿಯಾಲಿಟಿ, ಆಗ್ಮೆಂಟೆಡ್ ರಿಯಾಲಿಟಿ ಸೇರಿದಂತೆ ಹಲವು ಅತ್ಯಾಧುನಿಕ ತಂತ್ರಜ್ಞಾನವನ್ನು ಈ ನೆಟ್‌ವರ್ಕ್ ಸ್ಪೀಡ್ ಸಪೋರ್ಟ್ ಮಾಡಲಿದೆ. ಫೈಬರ್ ಆಪ್ಟಿಕ್ ಆರ್ಕಿಟೆಕ್ಚರ್ ಅನ್ನು ಅಪ್‌ಗ್ರೇಡ್ ಮಾಡಿದಾಗ ಸಿಂಗಲ್ ಯೂಸರ್ ಬ್ಯಾಂಡ್‌ವಿಡ್ತ್ ಅನ್ನು ಸಾಂಪ್ರದಾಯಿಕ ಗಿಗಾಬೈಟ್‌ನಿಂದ 10ಜಿ ಹಂತಕ್ಕೆ ಕೊಂಡೊಯ್ಯುತ್ತದೆ ಎಂದು ವರದಿಗಳು ಉಲ್ಲೇಖಿಸಿವೆ.

ಬ್ರಾಡ್‌ಬ್ಯಾಂಡ್ ವೇಗವರ್ಧನೆಯು ಭವಿಷ್ಯದಲ್ಲಿ 8ಕೆ ವಿಡಿಯೊ ಸ್ಟ್ರೀಮಿಂಗ್ ಆ್ಯಪ್‌ಗಳು ಹಾಗೂ ಅಡ್ವಾನ್ಸ್ಡ್ ಕ್ಲೌಡ್ ಕಂಪ್ಯೂಟಿಂಗ್ ಹಾಗೂ ಅತ್ಯುನ್ನತ ವರ್ಚುವಲ್ ರಿಯಾಲಿಟಿ (ಎಆರ್/ವಿಆರ್ ಗೇಮಿಂಗ್) ಅನುಭವಕ್ಕೆ ಹೊಸ ಬಾಗಿಲುಗಳನ್ನು ತೆರೆಯಬಹುದಾಗಿದೆ. ■